# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570 006

ದಿನಾಂಕ 29.07.2020ರಂದು ಪೂರ್ವಾಹ್ನ 11.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಛೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 55ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ಲಿಂಗರಾಜ್ ಗಾಂಧಿ**<br>ಕುಲಸಚಿವರು ಹಾಗು ಶೈಕ್ಷಣಿಕ ಮಂಡಳಿಯ<br>ಸದಸ್ಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಡಾ. ತೇಜಸ್ವಿ ನವಿಲೂರು**<br>ಡೀನ್ (ಶೈಕ್ಷಣಿಕ) ಹಾಗು<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ. ಕವಿತಾ ರೈ**<br>ಕುಲಸಚಿವರು (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಪ್ರೊ. ಕಾಂಬ್ಳೆ ಅಶೋಕ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗು<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ|| ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ<br>ಹಾಗು ಸಂಶೋಧನಾ ವಿಭಾಗ ಮತ್ತು<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್ .ಎಸ್**<br>CIQA ನಿರ್ದೇಶಕರು<br>ಕರಾಮುವಿ, ಮೈಸೂರು. | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 55ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು ಮತ್ತು ಡೀನ್(ಶೈಕ್ಷಣಿಕ) ಅವರಿಗೆ ಸಭೆಯ ಕಾರ್ಯಸೂಚಿ ವಿವರಗಳು ಹಾಗು ವಿಷಯಗಳನ್ನು ಚರ್ಚಿಸಿ, ನಿರ್ಣಯಕ್ಕಾಗಿ ಮಂಡಿಸಲು ತಿಳಿಸಿದರು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ : 55.01**

**ವಿಷಯ** : ಕರಾಮುವಿ ನಿಲಯದಲ್ಲಿ ಪ್ರವೇಶಾತಿ ಹೊಂದಿರದ ಅನ್ಯ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಗಳನ್ನು ವಿತರಿಸುವ ಬಗೆಗೆ.

****

ಕರಾಮುವಿ ನಿಲಯದಲ್ಲಿ ಪ್ರವೇಶಾತಿ ಹೊಂದಿರದ ಅನ್ಯ ವಿದ್ಯಾರ್ಥಿಗಳು (ವಿವಿಧ ಸ್ಪರ್ಧಾತ್ಮಕ ಪರೀಕ್ಷಾಗಳಿಗೆ ತಯರಾಗಲು) ವಿ.ವಿ ನಿಲಯದ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಒದಗಿಸುವಂತೆ ಮನವಿ ಸಲ್ಲಿಸುತ್ತಿದ್ದು. ಇಂತಹ ವಿದ್ಯಾರ್ಥಿಗಳಿಗೆ ವಿ.ವಿ ನಿಲಯದ ಸ್ವಯಂ ಕಲಿಕಾ ಸಾಮಗ್ರಿಗಳನ್ನು ವಿತರಿಸಲು ಯಾವುದೇ ನಿಯಮಗಳನ್ನು ರೂಪಿಸಿರುವುದಿಲ್ಲ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಅಧ್ಯಯನ ಸಾಮಗ್ರಿಗಳನ್ನು ವಿತರಿಸಲಾಗುತ್ತಿದ್ದು ಅಂತಹ ವಿದ್ಯಾರ್ಥಿಗಳು ವಿತರಿಸಲಾಗಿದ್ದ ಅಧ್ಯಯನ ಸಾಮಗ್ರಿಗಳನ್ನು ಕಳೆದುಕೊಂಡಲ್ಲಿ ನಿಯಾಮಾನುಸಾರ ಪರಿಶೀಲಿಸಿ ಒಂದು ಬ್ಲಾಕ್‌ಗೆ ರೂ 50/- ಗಳಂತೆ ಪಾವತಿಸಿಕೊಂಡು ವಿತರಿಸಲಾಗುತ್ತಿದ್ದು ಅನ್ಯ ವಿದ್ಯಾರ್ಥಿಗಳಿಗೆ ಸ್ವಯಂ ಕಲಿಕಾ ಸಾಮಗ್ರಿಗಳನ್ನು ವಿತರಿಸಲು ಯಾವ ಕ್ರಮ ಕೈಗೊಳ್ಳಬಹುದು ಎಂಬುದರ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ತೀರ್ಮಾನ : **ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಕಲಿಕಾ ಸಾಮಗ್ರಿಗಳನ್ನು ಹೊರಗಿನ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದು, ಈಗಿರುವ ದರ ಪ್ರತಿಯೊಂದು ಬ್ಲಾಕ್‌ಗೆ ರೂ. 50/-ಕ್ಕೆ ಬದಲಾಗಿ ರೂ. 100/-ರಂತೆ ಒದಗಿಸಲು ನಿರ್ಣಯಿಸಲಾಯಿತು, ಹಾಗು ಸದರಿ ವಿಷಯವನ್ನು ಹಣಕಾಸು ಸಮಿತಿ ಸಭೆಯ ಅನುಮೋದನೆಗೆ ಮಂಡಿಸಲು ತೀರ್ಮಾನಿಸಲಾಯಿತು.**

-----

**ವಿಷಯ ಸಂಖ್ಯೆ : 55.02**

ವಿಷಯ: **ಮಾನವಶಾಸ್ತ್ರ ಅಧ್ಯಯನ ವಿಭಾಗವನ್ನು ಪ್ರತ್ಯೇಕ ವಿಭಾಗವನ್ನಾಗಿ ಪರಿಗಣಿಸುವಂತೆ ನೀಡಲಾಗಿರುವ ಮನವಿ ಬಗ್ಗೆ.**

*****

ದಿನಾಂಕ:15.07.2017 ರಂದು ನಡೆದ 41ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯ ಸಂಖ್ಯೆ:41.01-ಮಾನವಶಾಸ್ತ್ರ ಐಚ್ಛಿಕ ವಿಷಯವಾಗಿ ಸ್ನಾತಕ ಹಂತದಲ್ಲಿ (ಬಿ.ಎ.ಮಾತ್ರ) ನಡೆಯುತ್ತಿದ್ದು viability ಯನ್ನು ಗಮನಿಸಿ ಮಾನವಶಾಸ್ತ್ರ ಅಧ್ಯಯನ ವಿಭಾಗವನ್ನು ಸಮಾಜಶಾಸ್ತ್ರ ವಿಭಾಗದೊಡನೆ ವಿಲೀನಗೊಳಿಸಲು ನಿರ್ಣಯಿಸಲಾಗಿತ್ತು.

ದಿನಾಂಕ; 17.05.2019 ರಂದು ನಡೆದ 156ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಿದ್ದು, ಶೈಕ್ಷಣಿಕ ಮಂಡಳಿ ಸಭೆಯ ನಿರ್ಣಯವನ್ನು ಅನುಷ್ಠಾನಗೊಳಿಸುವಂತೆ ತೀರ್ಮಾನಿಸಲಾಗಿತ್ತು.

ಈ ಸಂಬಂಧ ದಿನಾಂಕ:22.05.2019 ರಂದು ಕಚೇರಿ ಆದೇಶವನ್ನು ಹೊರಡಿಸಿ (ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡಿಎಸಿ/04/507/2019-20,ದಿನಾಂಕ:22.05.2019) ಮಾನವಶಾಸ್ತ್ರ ಅಧ್ಯಯನ ವಿಭಾಗವನ್ನು ಸಮಾಜಶಾಸ್ತ್ರ ಅಧ್ಯಯನ ವಿಭಾಗದೊಡನೆ ವಿಲೀನಗೊಳಿಸುವುದರ ಮುಖಾಂತರ ವ್ಯವಸ್ಥಾಪನಾ ಮಂಡಳಿ ತೀರ್ಮಾನವನ್ನು ಅನುಷ್ಠಾನಗೊಳಿಸಲಾಯಿತು.

ಕುಲಸಚಿವರು

ಕುಲಪತಿಗಳು

ಮೇಲಿನ ಆದೇಶಕ್ಕೆ ಸಂಬಂಧಿಸಿದಂತೆ **ದಿನಾಂಕ: 04.06.2019** ರಲ್ಲಿ ಡಾ.ಅಪ್ಪಾಜಿಗೌಡ, ಸಹಾಯಕ ಪ್ರಾಧ್ಯಾಕಪರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು., ರವರು ಮಾನ್ಯ ಕುಲಪತಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದ್ದು, ಮಾನವಶಾಸ್ತ್ರ ಅಧ್ಯಯನ ವಿಭಾಗವನ್ನು ಪ್ರತ್ಯೇಕ ವಿಭಾಗವನ್ನಾಗಿ ಪರಿಗಣಿಸುವಂತೆ ಕೋರಿರುತ್ತಾರೆ. ಈ ಪತ್ರಕ್ಕೆ ಸಂಬಂಧಿಸಿದಂತೆ ದಿನಾಂಕ:08.07.2019 ರಂದು ಟಿಪ್ಪಣಿಯ ಮುಖಾಂತರ ಮಾನವಶಾಸ್ತ್ರದ ಸ್ನಾತಕೋತ್ತರ ಕೋರ್ಸ್‌ನ್ನು ಯು.ಜಿ.ಸಿ. ನಿಯಮದಂತೆ ಆರಂಭಿಸಿದಲ್ಲಿ, ವ್ಯವಸ್ಥಾಪನಾ ಮಂಡಳಿಯ ಸಭೆಯ ಅನುಮೋದನೆ ಪಡೆದು ಪ್ರತ್ಯೇಕ ವಿಭಾಗವನ್ನು ಪ್ರಾರಂಭಿಸಲಾಗುವುದು. ಅಲ್ಲಿಯವರೆಗೆ ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡಿಎಸಿ/04/507/2019–20,ದಿನಾಂಕ:22.05.2019ರ ಪ್ರಕಾರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುವಂತೆ ಕುಲಸಚಿವರು ಸೂಚಿಸಿದ್ದಾರೆ

**ದಿನಾಂಕ:10.07.2019** ರಂದು ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

**ದಿನಾಂಕ: 01.06.2020** ರಂದು ಡಾ.ಅಪ್ಪಾಜಿಗೌಡ, ಸಹಾಯಕ ಪ್ರಾಧ್ಯಾಪಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ., ರವರು ಮತ್ತೊಂದು ಮನವಿ ಪತ್ರವನ್ನು ಸಲ್ಲಿಸಿದ್ದು, ಮಾನವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ನಾತಕ ಮತ್ತು ಮುಂದೆ ಸ್ನಾತಕೋತ್ತರ ಪದವಿಯನ್ನು ಪ್ರಾರಂಭಿಸಲು ಸಹಕಾರಿಯಾಗುವಂತೆ ಮಾನವಶಾಸ್ತ್ರ ಅಧ್ಯಯನ ವಿಭಾಗವನ್ನು ಪ್ರತ್ಯೇಕ ವಿಭಾಗವನ್ನಾಗಿ ಪರಿಗಣಿಸುವಂತೆ ಕೋರಿರುತ್ತಾರೆ. ಈ ಸಂಬಂಧ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : ಕರಾಮುವಿಯಲ್ಲಿ ಮಾನವಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮ ಇಲ್ಲದ ಕಾರಣ ಹಾಗು ಮಾನವಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ನೂತನ ಪಿ.ಪಿ.ಆರ್‌ಗಳನ್ನು ಯುಜಿಸಿಗೆ ಸಲ್ಲಿಸದೇ ಇರುವುದರಿಂದ ಡಾ. ಅಪ್ಪಾಜಿಗೌಡ, ಸಹಾಯಕ ಪ್ರಾಧ್ಯಾಪಕರು ಅವರನ್ನು ಸಮಾಜಶಾಸ್ತ್ರ ವಿಭಾಗದಲ್ಲಿಯೇ ಕಾರ್ಯನಿರ್ವಹಿಸಲು ಮತ್ತು ಸ್ನಾತಕ ಪದವಿ ಮಟ್ಟದಲ್ಲಿ ನೀಡಲಾಗುತ್ತಿರುವ ಮಾನವಶಾಸ್ತ್ರ ವಿಷಯದ ಸಂಯೋಜನಕರನ್ನಾಗಿ ಮುಂದುವರೆಸಲು ಸಭೆಯು ತೀರ್ಮಾನಿಸಿತು.

-----

ವಿಷಯ ಸಂಖ್ಯೆ : **55.03**

ವಿಷಯ : ವಿಶ್ವವಿದ್ಯಾನಿಲಯದ ಸ್ನಾತಕ, ಸ್ನಾತಕೋತ್ತರ ಪದವಿಗಳು, ಎಲ್ಲಾ ಪಿಜಿ ಡಿಪ್ಲೊಮಾ, ಡಿಪ್ಲೊಮಾ, ಮತ್ತು ಸರ್ಟಿಫಿಕೇಟ್ ಕೋರ್ಸ್ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸುವ ಬಗೆಗೆ.

*****

**ಪ್ರಸ್ತಾವನೆ :**

ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕ/ಸ್ನಾತಕೋತ್ತರ ಪದವಿಗಳ ಹಾಗೂ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಬಗ್ಗೆ ಕೋವಿಡ್–19 ಸಾಂಕ್ರಾಮಿಕ ರೋಗದ ಸಮಸ್ಯೆಯ ಹಿನ್ನೆಲೆಯಲ್ಲಿ ಯುಜಿಸಿಯ D.O.No.F.1-1 /2020 (Secy), Dated: 6th July, 2020, ಪ್ರಕಾರ ಪರಿಷ್ಕೃತ ಪರೀಕ್ಷಾ ಮಾರ್ಗಸೂಚಿಗಳು

ಕುಲಸಚಿವರು

ಕುಲಪತಿಗಳು

ಬಿಡುಗಡೆಯಾಗಿರುತ್ತದೆ ಹಾಗು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ನಡಾವಳಿಯ/ ಆದೇಶ ಸಂಖ್ಯೆ: ED/197/UNE/2020, Bangalore, Dated: 10-07-2020 ರಲ್ಲಿ ಯುಜಿಸಿಯ ಮಾರ್ಗದರ್ಶನಗಳನ್ನು ಪಾಲಿಸಲು ಸೂಚಿಸಲಾಗಿರುತ್ತದೆ (ಪ್ರತಿಗಳನ್ನು ಲಗತ್ತಿಸಿದೆ).

ವಿವಿಧ ಶೈಕ್ಷಣಿಕ ಸಾಲುಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರಸ್ತುತ ಪರೀಕ್ಷಾ ವೇಳಾಪಟ್ಟಿ, ಪರೀಕ್ಷಾ ಶುಲ್ಕ ನಿಗಧಿಪಡಿಸಿಕೊಂಡು ಅಧಿಸೂಚನೆಯನ್ನು ವಿ.ವಿ.ಯು ನಿಯಮಾನುಸಾರ ಹೊರಡಿಸಬೇಕಾಗಿರುತ್ತದೆ. ಈ ಬಗೆಗೆ ಈ ಕೆಳಕಂಡ ವಿಷಯಗಳನ್ನು 55ನೇ ಸಾಮಾನ್ಯ ಶೈಕ್ಷಣಿಕ ಮಂಡಳಿಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

A. 2001–02 ರಿಂದ 2010–11ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳು ಮತ್ತು 2001–02 ರಿಂದ 2012–13ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗಳು ಮತ್ತು ಎಲ್ಲಾ ಪಿಜಿ ಡಿಪ್ಲೊಮಾ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಲ್ಲಿ ಅನುತ್ತೀರ್ಣರಾಗಿರುವ ಅಥವಾ ಪರೀಕ್ಷೆ ತೆಗೆದುಕೊಂಡಿಲ್ಲದೆ ಇರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯವು ಶೈಕ್ಷಣಿಕ ಹಿತದೃಷ್ಟಿಯಿಂದ ಒಂದು ಬಾರಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಸದಾವಕಾಶವನ್ನು ನೀಡಿ, ದಿನಾಂಕ: 14–11–2019 ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಈ ಅಧಿಸೂಚನೆಯಲ್ಲಿ ಇಂತಹ ವಿದ್ಯಾರ್ಥಿಗಳಿಗೆ ಮೈಸೂರು ಕೇಂದ್ರದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿರುತ್ತದೆ. ಈ ಅಧಿಸೂಚನೆಗೆ ಅನುಗುಣವಾಗಿ ಕೆಲವು ವಿದ್ಯಾರ್ಥಿಗಳು (ಸರಿ ಸುಮಾರು 3000 ಮಂದಿ) ಅನ್ವಯಿತ ಪರೀಕ್ಷಾ ಶುಲ್ಕವನ್ನು ಭರಿಸಿ ಅರ್ಜಿ ಸಲ್ಲಿಸಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಬೇಕಾದ ಸಂಬಂಧ ಅಯಾಯ ಸಾಲಿನಲ್ಲಿ ಪಡೆದ ಪಠ್ಯಕ್ರಮಗಳಿಗೆ ಅನುಗುಣವಾಗಿ ಬರುವಂತಹ ಪ್ರಶ್ನೆಪತ್ರಿಕೆಗಳಿಗೆ ಉತ್ತರ ಸಲ್ಲಿಸ ಬೇಕಾಗಿರುವುದು ಹಾಗು ಸಮಯ, ದಿನಾಂಕ, ಪರೀಕ್ಷಾ ಕೇಂದ್ರ ಮತ್ತಿತ್ತರೆ ಸಂಬಂಧಿತ ವಿಷಯಗಳ ಬಗ್ಗೆ ಚರ್ಚೆ ಹಾಗು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ (ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆಯ ಪ್ರತಿ ಲಗತ್ತಿಸಿದೆ).

B. 2013–14 ಮತ್ತು 2014–15ನೇ ಶೈಕ್ಷಣಿಕ ಸಾಲಿನ ಸ್ನಾತಕ, ಸ್ನಾತಕೋತ್ತರ ಪದವಿ ಮತ್ತು ಪಿಜಿ ಡಿಪ್ಲೊಮಾ, ಡಿಪ್ಲೊಮಾ, ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ/ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶ ನೀಡಿ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಲು ದಿನಾಂಕ: 11–12–2019 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ವಿದ್ಯಾರ್ಥಿಗಳಿಗೆ ರಾಜ್ಯದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿರುತ್ತದೆ. ಈ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಬೇಕಾದ ಸಂಬಂಧ ಸಮಯ, ದಿನಾಂಕ, ಪರೀಕ್ಷಾ ಕೇಂದ್ರ ಮತ್ತಿತ್ತರೆ ಸಂಬಂಧಿತ ವಿಷಯಗಳ ಬಗ್ಗೆ ಚರ್ಚೆ ಹಾಗು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ (ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆಯ ಪ್ರತಿ ಲಗತ್ತಿಸಿದೆ).

C. 2011–12, 2012–13 ಮತ್ತು 2018–19ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಗಳ ಬಿಎ/ಬಿಕಾಂ ವಿದ್ಯಾರ್ಥಿಗಳಿಗೆ **ಪೂರಕ ಪರೀಕ್ಷೆಗಳನ್ನು** ಹಾಗು ಎಂಬಿಎ ವಿದ್ಯಾರ್ಥಿಗಳಿಗೆ ಪ್ರಥಮ/ ದ್ವಿತೀಯ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಲು ಅಧಿಸೂಚನೆ ಹೊರಡಿಸಿ ವೇಳಾಪಟ್ಟಿ ನಿಗದಿಪಡಿಸಿಕೊಂಡು, ಪರೀಕ್ಷೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಕೋವಿಡ್- 19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನು ಮುಂದೂಡಲಾಗಿತ್ತು. ಪ್ರಸ್ತುತ, ಬಾಕಿ ಉಳಿದ/ಮುಂದೂಡಲ್ಪಟ್ಟಿದ್ದ ಪತ್ರಿಕೆಗಳಿಗೆ ಪರೀಕ್ಷೆಗಳನ್ನು ನಡೆಸಲು ಸಮಯ, ದಿನಾಂಕ, ಪರೀಕ್ಷಾ ಕೇಂದ್ರ ಮತ್ತಿತ್ತರೆ ಸಂಬಂಧಿತ ವಿಷಯಗಳ ಬಗ್ಗೆ ಚರ್ಚೆ ಹಾಗು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ (ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆಯ ಪ್ರತಿ ಲಗತ್ತಿಸಿದೆ). ಮುಂದೂಡಲ್ಪಟ್ಟ ಪತ್ರಿಕೆಗಳ ವಿವರ ಕೆಳಕಂಡಂತಿರುತ್ತದೆ.

ಕುಲಸಚಿವರು

ಕುಲಪತಿಗಳು

| ಕ್ರ ಸಂ. | ಶಿಕ್ಷಣಕ್ರಮ | ಈಗಾಗಲೇ ಪೂರಕ ಪರೀಕ್ಷೆ ನಡೆದಿರುವ ಪತ್ರಿಕೆಗಳು | ಉಳಿಕೆ ಪೂರಕ ಪರೀಕ್ಷೆ ನಡೆಸಬೇಕಾದ ಪತ್ರಿಕೆಗಳು |
|---|---|---|---|
| 01 | ಸ್ನಾತಕ ಪದವಿ 2011-12, 2012-13, 2018-19 | **19 ಪತ್ರಿಕೆಗಳು** 24-02-2020 ರಿಂದ 13-03-2020 ರವರೆಗೆ | 16 ಪತ್ರಿಕೆಗಳು |
| 02 | ಎಂಬಿಎ ಪ್ರಥಮ ಮತ್ತು ದ್ವಿತೀಯ ಸೆಮ್ 2014-15, 2018-19, 2019-20 | **04 ಪತ್ರಿಕೆಗಳು (ಸೆಮಿಸ್ಟರ್)** 10-03-2020 ರಿಂದ 13-03-2020 ರವರೆಗೆ | 02 ಪತ್ರಿಕೆಗಳು (ಸೆಮಿಸ್ಟರ್) |

D. 2013-14 ಮತ್ತು 2014-15ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು 2019-20ನೇ ಸಾಲಿನಲ್ಲಿ ತೃತೀಯ ವರ್ಷದ ಬಿಎ/ಬಿಕಾಂ ಪದವಿಗೆ ಪ್ರವೇಶಾತಿ ನವೀಕರಣ ಪಡೆದಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಅಂತಿಮ ವರ್ಷದ ಪರೀಕ್ಷೆಗಳು ನಡೆದಿರುವುದಿಲ್ಲ.

ಅದೇ ರೀತಿ 2018-19ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದು 2019-20ನೇ ಶೈಕ್ಷಣಿಕ ಸಾಲಿನಲ್ಲಿ ಅಂತಿಮ ಎಂಎ/ಎಂಕಾಂ ಪದವಿಗೆ ಪ್ರವೇಶಾತಿ ನವೀಕರಣಗೊಂಡಿರುವ ವಿದ್ಯಾರ್ಥಿಗಳಿಗೆ, ಪ್ರಸ್ತುತ, ಪರೀಕ್ಷೆಗಳನ್ನು ನಡೆಸಬೇಕಾಗಿದೆ.

ಸದರಿ ಸಾಲಿನ ವಿದ್ಯಾರ್ಥಿಗಳಿಗೆ ಯುಜಿಸಿಯ ಪರಿಷ್ಕೃತ ಮಾರ್ಗದರ್ಶನದಲ್ಲಿನ ಕ್ರಮ ಸಂಖ್ಯೆ 01ರ ಸೂಚನೆ ಮತ್ತು ಸರ್ಕಾರದ ಆದೇಶದನ್ವಯ ಪರೀಕ್ಷೆಗಳನ್ನು ನಡೆಸುವ ಸಂಬಂಧವಾಗಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಈ ಬಗೆಗೆ ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

E. 2019-20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಸ್ನಾತಕ/ಸ್ನಾತಕೋತ್ತರ ಪದವಿಗಳು ಮತ್ತು ಎಲ್ಲಾ ಪಿಜಿ ಡಿಪ್ಲೊಮಾ, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರಥಮ ವರ್ಷದ/ಪ್ರಥಮ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಮತ್ತು 2018-19ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದು 2019-20ನೇ ಸಾಲಿನಲ್ಲಿ ದ್ವಿತೀಯ ವರ್ಷದ ಬಿಎ/ಬಿಕಾಂ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ನವೀಕರಣ ಹೊಂದಿರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಯುಜಿಸಿ ಪರಿಷ್ಕೃತ ಪರೀಕ್ಷಾ ಮಾರ್ಗಸೂಚಿಯಲ್ಲಿನ ಕ್ರಮ ಸಂಖ್ಯೆ 02ರ ಸೂಚನೆ ಮತ್ತು ಸರ್ಕಾರದ ಆದೇಶದನ್ವಯ ಪರೀಕ್ಷೆಗಳನ್ನು ನಡೆಸುವ ಸಂಬಂಧವಾಗಿ ವಿಶ್ವವಿದ್ಯಾನಿಲಯದಲ್ಲಿ ಯಾವ ಮಾನದಂಡಗಳನ್ನು ವಿ.ವಿ.ಯು ಅಳವಡಿಸಿಕೊಳ್ಳಬೇಕೆಂಬುದರ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ (ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಆಂತರಿಕ ನಿಬಂಧಗಳ ನಿರಂತರ ಮೌಲ್ಯಮಾಪನದಡಿಯಲ್ಲಿ ವಾರ್ಷಿಕ ಎರಡು ಬಾರಿ ಆಂತರಿಕ ನಿಬಂಧನೆಗಳನ್ನು 20 ಅಂಕಗಳಿಗೆ ನಿಗದಿಪಡಿಸಲಾಗಿದೆ).

ಕುಲಸಚಿವರು

ಕುಲಪತಿಗಳು

ತೀರ್ಮಾನ : ಕೋವಿಡ್-19ರ ಸಮಸ್ಯೆಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ, ಯುಜಿಸಿ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿಗಳನ್ನು ವಿಶ್ವವಿದ್ಯಾನಿಲಯವು ಯಥಾವತ್ತಾಗಿ ಅಳವಡಿಸಿಕೊಂಡು ಪರೀಕ್ಷೆಗಳನ್ನು ನಡೆಸಲು ಮತ್ತು ಎ ಯಿಂದ ಇ ವರೆಗೆ ಪ್ರಸ್ತಾಪಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮವಹಿಸಲು ಸಭೆಯು ನಿರ್ಣಯಿಸಿತು. ಮುಂದುವರೆದು, ಸರ್ಕಾರದ ನಿರ್ದೇಶನದ ಅನ್ವಯ ಪರೀಕ್ಷೆಗಳಿಂದ ವಿನಾಯಿತಿ ನೀಡಲಾಗಿರುವ ವಿದ್ಯಾರ್ಥಿಗಳಿಗೆ ಮುಂದಿನ ತರಗತಿಗಳಿಗೆ ಉತ್ತೀರ್ಣಗೊಳಿಸುವ ಸಂಬಂಧ ರೂಪುರೇಷೆಗಳು ಹಾಗು ವಿಧಿ ವಿಧಾನಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಲು ಡೀನ್(ಶೈಕ್ಷಣಿಕ) ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಿ ಕಾರ್ಯಪ್ರವೃತ್ತರಾಗಲು ಸಭೆಯು ನಿರ್ಣಯಿಸಿತು.

-----

<u>ವಿಷಯ ಸಂಖ್ಯೆ: 55.04</u>

ವಿಷಯ: ಕಾನೂನು ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಪರಿಗಣಿಸುವಂತೆ ನೀಡಲಾಗಿರುವ ಮನವಿ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ನಡೆಸುತ್ತಿದ್ದ LLM Course ಗೆ Bar Council of India ಇವರಿಂದ ಪೂರ್ವಾನುಮತಿ ಪಡೆದಿಲ್ಲವೆಂಬ ಕಾರಣದಿಂದ UGC ಯಿಂದ ಮಾನ್ಯತೆ ನಿರಾಕರಣೆಯಾಗಿದ್ದ ಹಿನ್ನೆಲೆಯಲ್ಲಿ ಕಾನೂನು ವಿಭಾಗವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ Dr. S.S. Janavi, ಇವರನ್ನು ಸ್ಥಾನದಿಂದ ಬಿಡುಗಡೆಗೊಳಿಸಿ ಕಾನೂನು ವಿಷಯಕ್ಕೆ ಸಂಬಂಧಪಟ್ಟ Diploma in Business Law ರ ಶೈಕ್ಷಣಿಕ ಚಟುವಟಿಕೆಯನ್ನು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ವರದಿಮಾಡಿಕೊಂಡು ಕಾರ್ಯನಿರ್ವಹಿಸಲು 156ನೇ BOM ಸಭೆಯ ನಿರ್ಣಯದಂತೆ ದಿ:29.05.2019ರ ಕಚೇರಿ ಅದೇಶದನ್ವಯ ಆದೇಶಿಸಲಾಗಿತ್ತು. ಅದರಂತೆ, ಕಾನೂನು ವಿಷಯದ ಶೈಕ್ಷಣಿಕ ಚಟುವಟಿಕೆಗಳು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಿಂದ ನಡೆಯುತ್ತಿದೆ.

ಕಾನೂನು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ Dr.S.S. Janavi ರವರು ದಿನಾಂಕ:21.11.2019 ರಂದು ಮನವಿ ಪತ್ರ ನೀಡಿ, ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಕಾನೂನು ವಿಷಯದಲ್ಲಿನ ಅಧ್ಯಯನ ಸಾಮಗ್ರಿಗಳನ್ನು ಬಳಸಿಕೊಂಡು Diploma & Certificate Course ಗಳನ್ನು ಆರ್ಥಿಕ ಹೊರೆಯಿಲ್ಲದಂತೆ PPRಗಳನ್ನು ಸಿದ್ಧಪಡಿಸಿ BOS ಸಭೆಯಲ್ಲಿ ಅನುಮತಿ ಪಡೆಯ ಬೇಕಾಗಿರುವುದರಿಂದ ಕಾನೂನು ವಿಭಾಗದ ಪುನಸ್ಥಿತಿಯನ್ನು ಕಾಪಾಡಲು ಕೋರಿದ್ದರು. ದಿ:26.12.2019ರ ಶೈಕ್ಷಣಿಕ ಮಂಡಳಿಯಲ್ಲಿ ಸದರಿ ವಿಷಯವನ್ನು ಮಂಡಿಸಲಾಗಿ, April 2020 ರಿಂದ ಕಾನೂನು ಅಧ್ಯಯನ ವಿಭಾಗವನ್ನು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಮತ್ತು Diploma & Certificate Courseಗಳನ್ನು July 2020 ಯಿಂದ ಪ್ರಾರಂಭಿಸಲು ಶೈಕ್ಷಣಿಕ ಮಂಡಳಿಯು ಅನುಮೋದನೆ ನೀಡಿ 159ನೇ ವ್ಯವಸ್ಥಾಪನ ಮಂಡಳಿಗೆ ಅನುಮೋದನೆಗಾಗಿ ಶಿಫಾರಸ್ಸು ಮಾಡಿರುತ್ತದೆ. ಈ ಸಂಬಂಧ ಸಂಖ್ಯೆ ಕರಾಮುವಿ/ಡೀನ್(ಶೈ)/03/2019-20,ದಿ:05.02.2020ರ ಅದೇಶವನ್ನು ಹೊರಡಿಸಲಾಗಿತ್ತು.

ಪ್ರಸ್ತುತ, ಸಹಾಯಕ ಪ್ರಾಧ್ಯಾಪಕರಾದ Dr. S.S.Janavi, ರವರು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ವಿಭಾಗದ ಅಧ್ಯಕ್ಷರನ್ನಾಗಿ ಗುರುತಿಸಿ ವಿಶ್ವವಿದ್ಯಾನಿಲಯದ ಅದೇಶ ನೀಡಬೇಕೆಂದು ದಿ:14.05.2020ಮತ್ತು ದಿ:19.05.2020ರಲ್ಲಿ ಮನವಿ ಪತ್ರಗಳು ಸಲ್ಲಿಸಿರುತ್ತಾರೆ.

ಕುಲಸಚಿವರು

ಕುಲಪತಿಗಳು

BOM ವಿಷಯ ಸಂಖ್ಯೆ:42.9, ದಿ:16.05.2001ರ ತೀರ್ಮಾನದಂತೆ ಕರಾಮುವಿಯ ವಿವಿಧ ಅಧ್ಯಯನ ವಿಭಾಗದ ಮುಖ್ಯಸ್ಥರನ್ನು ನೇಮಿಸಲು ಮೈಸೂರು ವಿಶ್ವವಿದ್ಯಾನಿಲಯದ ಪರಿನಿಯಮಗಳ ರೀತ್ಯಾ ಕ್ರಮವಹಿಸಲಾಗುತ್ತಿದೆ.

ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಕಾನೂನು ವಿಷಯಕ್ಕೆ ಸಂಬಂಧಿಸಿದಂತೆ ಪದವಿ ಮಟ್ಟದಲ್ಲಾಗಲಿ ಅಥವಾ ಸ್ನಾತಕೋತ್ತರ ಪದವಿ ಮಟ್ಟದಲ್ಲಾಗಲಿ ಯಾವುದೇ ಶೈಕ್ಷಣಿಕ ಕಾರ್ಯಕ್ರಮ ನಡೆಯುತ್ತಿಲ್ಲ. 2020-21ನೇ ಸಾಲಿನಲ್ಲಿ Diploma & Certificate Courseಗಳನ್ನು ಮಾತ್ರ ಪ್ರಾರಂಭಿಸಬೇಕಾಗಿರುವುದರಿಂದ Dr.S.S.Janavi, ಸಹಾಯಕ ಪ್ರಾಧ್ಯಾಪಕರೊಬ್ಬರೆ ಕಾನೂನು ವಿಷಯಕ್ಕೆ ಸಂಬಂಧಪಟ್ಟ ಉಪನ್ಯಾಸಕರಾಗಿದ್ದಾರೆ. ಈ ಸಂಬಂಧ ಸದರಿಯವರನ್ನು ಕಾನೂನು ವಿಭಾಗದಲ್ಲಿ ಅಧ್ಯಕ್ಷರನ್ನಾಗಿ ನೇಮಿಸಬೇಕೆ ಅಥವಾ ಸಂಯೋಜನಾಧಿಕಾರಿಯಾಗಿ ಕಾರ್ಯನಿರ್ವಹಿಸಬೇಕೆ ಎಂಬುದರ ಬಗ್ಗೆ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :** **ಕಾನೂನು ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟಂತೆ, ಡಾ. ಎಸ್.ಎಸ್. ಜಾಹ್ನವಿ, ಸಹಾಯಕ ಪ್ರಾಧ್ಯಾಪಕರು, ಇವರನ್ನು ಕಾನೂನು ವಿಷಯದಲ್ಲಿ ನೂತನವಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಡಿಪ್ಲೊಮ ಹಾಗು ಸರ್ಟಿಫಿಕೇಟ್ ಕಾರ್ಯಕ್ರಮಗಳಿಗೆ ವಿಷಯ ಸಂಯೋಜಕರನ್ನಾಗಿ ಕಾರ್ಯನಿರ್ವಹಿಸಲು ಮತ್ತು ರಾಜ್ಯಶಾಸ್ತ್ರ ವಿಭಾಗದಲ್ಲಿಯೇ ಮುಂದುವರೆಯಲು ಸಭೆಯು ನಿರ್ಣಯಿಸಿತು.**

-----

**ವಿಷಯ ಸಂಖ್ಯೆ : 55.05**

ವಿಷಯ: ವಿಷಯ: **Internet Charges** ಅನ್ನು ನಿಗದಿಪಡಿಸುವ ಬಗೆಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2019 ಜುಲೈ ಮತ್ತು 2020ರ ಶೈಕ್ಷಣಿಕ ಸಾಲಿನಿಂದ ಎಲ್ಲಾ **U.G./ P.G./B.Ed/Diploma/P.G. Diploma** ಮತ್ತು **Certificate** ಕೋರ್ಸ್‌ಗಳಿಗೆ ಸಂಬಂಧಿಸಿದ ವಿಷಯಗಳ **Online** ಸಂಪರ್ಕ ಕಾರ್ಯಕ್ರಮಕ್ಕೆ ಒಂದು ತರಗತಿಗೆ / ಒಂದು ಗಂಟೆಯ ಅವಧಿಗೆ **Internet Charges** ರೂ. 100/- ಗಳನ್ನು ನಿಗದಿಪಡಿಸಿದ್ದು ಸದರಿ ವಿಷಯವನ್ನು ಕ.ರಾ.ಮು.ವಿ.ಯ ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ ಅನುಮೋದನೆ ಮತ್ತು ತೀರ್ಮಾನವನ್ನು ಕೋರಿದೆ.

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಹಣಕಾಸು ಅಧಿಕಾರಿಗಳು ಮಾತನಾಡಿ ಸಂಪರ್ಕ ಕಾರ್ಯಕ್ರಮಕ್ಕೆ **Internet Charges** ರೂ. 100/- ಎಂದು ನಿಗದಿಪಡಿಸುವುದು ಸರಿಯಿರುವುದಿಲ್ಲ. ಕಾರಣವೇನೆಂದರೆ ಇತ್ತೀಚೆಗೆ ಹಲವು ಸೌಲಭ್ಯಗಳು ಲಭಿಸುತ್ತಿದ್ದು, ಇಂತಹ ವೆಚ್ಚವನ್ನು ಅಧ್ಯಾಪಕರುಗಳಿಗೆ ನೀಡುವ ಸಂಭಾವನೆಯಲ್ಲಿ ಸೇರಿಸುವುದು ಸೂಕ್ತ. ಇದರಲ್ಲಿ **Internet Charges** ಎಂದು ನಮೂದು ಮಾಡುವುದು ಬೇಡ. ಅದರ ಬದಲು ಅಂತರ್ಜಾಲದ ಸೌಲಭ್ಯದೊಂದಿಗೆ ಇಂತಿಷ್ಟು ಸಂಭಾವನೆ ಎಂದು ನೀಡುವುದರಿಂದ ಲೆಕ್ಕ ಪರಿಶೋಧಕರು ಆಕ್ಷೇಪಣೆ ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

**ತೀರ್ಮಾನ :** **ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳ Online ಸಂಪರ್ಕ ಕಾರ್ಯಕ್ರಮಗಳಿಗೆ Internet ವೆಚ್ಚಗಳನ್ನು ಪ್ರತ್ಯೇಕವಾಗಿ ನೀಡುವ ಬದಲು ತರಗತಿಗಳನ್ನು ತೆಗೆದುಕೊಳ್ಳುವ ಪರಿಣಿತರ ಸಂಭಾವನೆಯನ್ನು ಪರಿಷ್ಕರಿಸಲು ತೀರ್ಮಾನಿಸಲಾಯಿತು ಹಾಗು ಸದರಿ ವಿಷಯವನ್ನು ಹಣಕಾಸು ಸಮಿತಿ ಸಭೆಯ ಅನುಮೋದನೆಗೆ ಮಂಡಿಸಲು ತೀರ್ಮಾನಿಸಿತು.**

-----

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ : 55.06**

**ವಿಷಯ:** ಕರಾಮುವಿಯ ದೃಶ್ಯ-ಶ್ರವ್ಯ ಸ್ಟುಡಿಯೋದಲ್ಲಿ ಪಠ್ಯ ಸಂಬಂಧಿ ಕಾರ್ಯಕ್ರಮ ನಿರ್ಮಾಣ ಮಾಡಲು ಅಗತ್ಯವಿರುವ ನಿರ್ಧಾರಗಳನ್ನು ತೆಗೆದುಕೊಳ್ಳುವ ಬಗೆಗೆ.

****

ಅ. ಯುಜಿಸಿಯ ಮುಕ್ತ ಹಾಗು ದೂರ ಶಿಕ್ಷಣ ನಿಯಮಾವಳಿ 2017ರ ಆಶಯದಂತೆ ಸ್ವಯಂ ಕಲಿಕಾ ಸಾಮಗ್ರಿಗೆ ವಿದ್ಯುನ್ಮಾನ ಕಲಿಕಾ ಸಾಮಗ್ರಿಯನ್ನು ತಯಾರಿಸುವ/ಸಿದ್ಧಪಡಿಸುವ ದೃಷ್ಟಿಯಿಂದ ಸುಸಜ್ಜಿತ ಆಡಿಯೋ ವಿಷುಯಲ್ ಸ್ಟುಡಿಯೋ ಸ್ಥಾಪಿಸಲಾಗಿದೆ. ಮುಂಬರುವ ಶೈಕ್ಷಣಿಕ ವರ್ಷದಿಂದ ಗುಣಮಟ್ಟದ ಕಲಿಕಾ ವ್ಯವಸ್ಥೆಯನ್ನು ಸ್ಥಾಪಿಸಲು ಅನುವಾಗುವಂತೆ ಹಾಗು ಪರಿಣಾಮಕಾರಿ ಕಲಿಕೆಗೆ ಅನುಕೂಲವಾಗುವಂತೆ ಕ್ರಮವಹಿಸಲು ವಿಶ್ವವಿದ್ಯಾನಿಲಯದ ಆಡಿಯೋ-ವಿಷ್ಯುವಲ್ ಸ್ಟುಡಿಯೋ ವತಿಯಿಂದ ಅಧ್ಯಾಪಕರಿಗೆ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ. ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪಠ್ಯಕ್ಕೆ ಸಂಬಂಧಪಟ್ಟಂತೆ ಕಾರ್ಯಕ್ರಮಗಳನ್ನು ನಿರ್ಮಾಣ ಮಾಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಅಕ್ಟೋಬರ್ ತಿಂಗಳಲ್ಲಿ ಕರಾಮುವಿಯ ರೇಡಿಯೋ ವಾಹಿನಿ ಕಾರ್ಯಾರಂಭ ಮಾಡಲಿದ್ದು, ಈ ಸಂಬಂಧ ಸಮಾಜವಿಜ್ಞಾನ, ಮಾನವಿಕ, ವಾಣಿಜ್ಯ ಮತ್ತು ನಿರ್ವಹಣಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಕರಾಮುವಿಯ ಮತ್ತು ಬಾಹ್ಯ ಪರಿಣತರಿಂದ ರೇಡಿಯೋ ಕಾರ್ಯಕ್ರಮ ಯೋಜಿಸಿ, ಅದನ್ನು ನಿಯಮಿತವಾಗಿ ಧ್ವನಿ ಮುದ್ರಿಸುವ, ಪ್ರಸಾರಕ್ಕೆ ಸಿದ್ಧಪಡಿಸುವ ಕಾರ್ಯಭಾರವನ್ನು ಹಂಚಿಕೊಳ್ಳಲು, ಈ ಕೆಳಗೆ ನಮೂದಿಸಿರುವ ಅಧ್ಯಾಪಕರುಗಳನ್ನು "ರೇಡಿಯೋ ಕಾರ್ಯಕ್ರಮ ಸಂಯೋಜಕರನ್ನಾಗಿ ಗುರುತಿಸಿ ಕಾರ್ಯಭಾರ ವಹಿಸಲು ಆಶಿಸಲಾಗಿದೆ.

| ಕ್ರ. ಸಂ. | ಅಧ್ಯಾಪಕರ ಹೆಸರು | ವಿಷಯ |
|---|---|---|
| 1 | Dr. Shashikumar T.P | Humanities |
| 2 | Dr. Usha C. | Commerce and Management |
| 3 | Dr. Bhavya | Science |
| 4 | Dr. Nandini | Science |
| 5 | Dr. N. Ananda Gowda | Social Sciences |
| 6 | Dr. V. Mahesha | Education and General Programmes |

ಆ. ಕರಾಮುವಿಯ ದೃಶ್ಯ-ಶ್ರವ್ಯ ಸ್ಟುಡಿಯೋವು ಹೊರಗಿನ ತಾಂತ್ರಿಕ ಮತ್ತು ವಿಷಯ ತಜ್ಞರ ಸೇವೆಯನ್ನು ಬಳಸಿಕೊಳ್ಳುವ ಪ್ರಸ್ತಾವನೆಯನ್ನು ಸಲ್ಲಿಸುತ್ತದೆ. ತಾಂತ್ರಿಕ ಮತ್ತು ವಿಷಯ ತಜ್ಞರಿಗೆ ಸಂಬಂಧಪಟ್ಟ ಸಂಭಾವನೆಯ ವಿವರಗಳು ಈ ಕೆಳಗಿನಂತಿವೆ:

1. ತಾಂತ್ರಿಕ ಸಹಾಯಕರಿಗೆ ಗೌರವ ಧನ – ರೂ.16,000/ಮಾಹೆ x ಇಬ್ಬರಿಗೆ
2. ಹೊರಗಿನ ವಿಷಯ ತಜ್ಞರಿಗೆ ಸಂಭಾವನೆ
   a. ಬಾನುಲಿ ಭಾಷಣ (15 ನಿಮಿಷ) – ರೂ.800/–
   b.ಬಾನುಲಿ ನುಡಿಚಿತ್ರ (15 ನಿಮಿಷ) – ರೂ.2,000/–
   c.ಬಾನುಲಿ ನಾಟಕ (15 ನಿಮಿಷ) – ರೂ.2,000/–
   d.ವಿಶೇಷ ಕಾರ್ಯಕ್ರಮಗಳು (20–30 ನಿಮಿಷ) – ರೂ.2,000/–
3. ಪ್ರತಿ ವಿಮರ್ಶಕರಿಗೆ ಮತ್ತು ಸೃಜನಾತ್ಮಕ ಬರಹಗಾರರಿಗೆ – ಸಭಾ ಭತ್ಯೆ + ಸ್ಥಳೀಯ ಭತ್ಯೆ

ಕುಲಸಚಿವರು

ಕುಲಪತಿಗಳು

**ಪ್ರಸ್ತಾಪಿಸಿರುವ ನಿಯಮಗಳು ಮತ್ತು ಷರತ್ತುಗಳು:**

1. ಹೊರಗಿನ ವಿಷಯತಜ್ಞರ ಕಾರ್ಯಕ್ರಮ ಪ್ರತಿಯು ವಿಮರ್ಶಾತ್ಮಕ ಸಮಿತಿಯ ಒಪ್ಪಿಗೆಯ ನಂತರವೇ ಧ್ವನಿಮುದ್ರಿಸಲಾಗುವುದು.
2. ಹೊರಗಿನ ವಿಷಯತಜ್ಞರು (ಮೈಸೂರು ಜಿಲ್ಲೆಯನ್ನು ಹೊರತುಪಡಿಸಿ) ಕನಿಷ್ಠ ಮೂರು ಕಾರ್ಯಕ್ರಮಗಳನ್ನು (ನಾಟಕ ಅಥವಾ ರೂಪಕ ಮಾತ್ರ) ಗಳನ್ನು ನಿರ್ಮಾಣ ಮಾಡಿ, ಅದನ್ನು ಧ್ವನಿಮುದ್ರಿಸಲು ಬರುವವರಿಗೆ ಮಾತ್ರ ಪ್ರಯಾಣಭತ್ಯೆ/ದಿನಭತ್ಯೆ ಪಾವತಿಸುವುದು.
3. ಸೃಜನಾತ್ಮಕ ಮತ್ತು ವಿಮರ್ಶಾತ್ಮಕ ಸಮಿತಿಯು ಒಟ್ಟು ಆರು ಸದಸ್ಯರನ್ನು ಒಳಗೊಂಡಿದ್ದು, ಇವರಲ್ಲಿ ಮೂವರು ಮೈಸೂರಿನ ಆಕಾಶವಾಣಿ ಕೇಂದ್ರದ ಕಾರ್ಯಕ್ರಮ ನಿರ್ಮಾಣ ಸಿಬ್ಬಂದಿ ಮತ್ತು ಉಳಿದ ಮೂವರು ವಿವಿಧ ಕ್ಷೇತ್ರದಲ್ಲಿನ ಸೃಜನಾತ್ಮಕ/ ವಿಷಯ ತಜ್ಞರಾಗಿರುತ್ತಾರೆ. ಇವರು ರೇಡಿಯೋ ಕಾರ್ಯಕ್ರಮಕ್ಕೆ ಸಲ್ಲಿಸಲ್ಪಡುವ ಕಾರ್ಯಕ್ರಮ ಪ್ರತಿಗಳನ್ನು ಉತ್ತಮಪಡಿಸುವ ಕಾರ್ಯವನ್ನು ನಿರ್ವಹಿಸುತ್ತಾರೆ.

ಈ ಮೇಲ್ಕಂಡ ವಿಷಯಗಳ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ಸದರಿ ವಿಷಯದ ಬಗ್ಗ ಕುಲಸಚಿವರು ಮಾತನಾಡಿ ಕರಾಮುವಿಯ ದೃಶ್ಯ-ಶ್ರವ್ಯ ಸ್ಟುಡಿಯೋವು ಹೊರಗಿನ ತಾಂತ್ರಿಕ ಮತ್ತು ವಿಷಯ ತಜ್ಞರ ಸೇವೆಯನ್ನು ಬಳಸಿಕೊಳ್ಳುವ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಕಾರ್ಯವು ವಿಶ್ವವಿದ್ಯಾನಿಲಯದ ಸಿಲಬಸ್‌ಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಮಾತ್ರ ಒಳಗೊಂಡಿರಬೇಕು ಹಾಗು ಇದಕ್ಕೊಂದು ಗೈಡ್‌ಲೈನ್ಸ್ ಸಿದ್ಧಪಡಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕರಾಮುವಿ ಸಿಲಬಸ್‌ಗಳಿಗೆ ಸಂಬಂಧಿಸಿದ ವಿಷಯಗಳಿಗೆ ಮಾತ್ರ ಕಾರ್ಯಕ್ರಮಗಳನ್ನು ನಿರ್ವಹಿಸಲು ಕ್ರಮವಹಿಸಬಹುದೆಂದು ಮತ್ತು ಪ್ರಸ್ತಾಪಿಸಿದಂತೆ ಸಮಿತಿಯನ್ನು ರಚಿಸಲು ಸೂಚಿಸಿದರು.

ತೀರ್ಮಾನ :

1. ಗುರುತಿಸಲಾಗಿರುವ ಬೋಧಕರನ್ನು ರೇಡಿಯೋ ಕಾರ್ಯಕ್ರಮ ಸಂಯೋಜಕರನ್ನಾಗಿ ನೇಮಿಸಿ ಕಾರ್ಯಾಭಾರ ವಹಿಸಲು ಸಭೆಯು ಅನುಮೋದಿಸಿತು.
2. ತಾಂತ್ರಿಕ ಮತ್ತು ವಿಷಯ ತಜ್ಞರಿಗೆ ಸಂಬಂಧಪಟ್ಟ ಸಂಭಾವನೆಯ ಮೊತ್ತಗಳನ್ನು ಸಭೆಯು ಅನುಮೋದಿಸಿತು.
3. ಪ್ರಸ್ತಾಪಿಸಲಾಗಿರುವ ನಿಯಮಗಳು ಹಾಗು ಷರತ್ತುಗಳ ಅನ್ವಯ ಕಾರ್ಯನಿರ್ವಹಿಸಲು ವಿಮರ್ಶಾತ್ಮಕ ಸಮಿತಿಯನ್ನು ನೇಮಿಸಲು ಅನುಮೋದನೆ ನೀಡಲಾಯಿತು. ಸದರಿ ನಿರ್ಣಯಗಳನ್ನು ಹಣಕಾಸು ಸಮಿತಿಯ ಮುಂದೆ ಮಂಡಿಸಿ ಒಪ್ಪಿಗೆ ಪಡೆಯಲು ನಿರ್ಣಯಿಸಲಾಯಿತು.

-----

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ : 55.07

ವಿಷಯ: ಕರಾಮುವಿಯಲ್ಲಿನ ಪರಿನಿಯಮಗಳಡಿ ಸ್ಥಾಪನೆಯಾಗಿರುವ ವಿವಿಧ ಪೀಠಗಳಲ್ಲಿ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಅಡಿಯಲ್ಲಿ ಒಂದು ಮುಕ್ತ ಆಯ್ಕೆಯ (Open Elective) ವಿಷಯವನ್ನು ಆರಂಭಿಸಲು ಅನುವಾಗುವಂತೆ ಪರಿನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈ ಕೆಳಕಂಡ ಪೀಠಗಳನ್ನು ಪರಿನಿಯಮಗಳೊಂದಿಗೆ ನಡೆಸಲಾಗುತ್ತಿದೆ.

| ಕ್ರ. ಸಂ. | ಅಧ್ಯಯನ ಪೀಠಗಳು | ಪರಿನಿಯಮಗಳು |
|---|---|---|
| 1 | ಮಹಾತ್ಮಾ ಗಾಂಧಿ ಅಧ್ಯಯನ ಪೀಠ | ರಚನೆಗೊಂಡಿದೆ |
| 2 | ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠ | ರಚನೆಗೊಂಡಿದೆ |
| 3 | ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಯನ ಪೀಠ | ರಚನೆಗೊಂಡಿದೆ |
| 4 | ಸ್ವಾಮಿ ವಿವೇಕಾನಂದ ಅಧ್ಯಯನ ಪೀಠ | ರಚನೆಗೊಂಡಿದೆ |
| 5 | ಕುವೆಂಪು ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ | ರಚನೆಗೊಂಡಿದೆ |
| 6 | ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಪೀಠ | ರಚನೆಗೊಂಡಿದೆ |
| 7 | ಅಕ್ಕಮಹಾದೇವಿ ಅಧ್ಯಯನ ಪೀಠ | ರಚನೆಗೊಂಡಿದೆ |
| 8 | ಬಿ.ವಿ. ಕಾರಂತ ಅಧ್ಯಯನ ಪೀಠ | ರಚನೆಗೊಂಡಿರುವುದಿಲ್ಲ |
| 9 | ಡಾ. ರಾಮಮನೋಹರ್ ಲೋಹಿಯಾ ಅಧ್ಯಯನ ಪೀಠ | ರಚನೆಗೊಂಡಿರುವುದಿಲ್ಲ |

ಮೇಲ್ಕಂಡ ಪೀಠಗಳಲ್ಲಿ ಕ್ರಮ ಸಂಖ್ಯೆ 08 ಮತ್ತು 09ರ ಪೀಠಗಳಿಗೆ ಪರಿನಿಯಮ ರಚನೆಗೊಂಡಿರುವುದಿಲ್ಲ. ಪರಿನಿಯಮ ರಚನೆಗೊಂಡಿರುವ ಪೀಠಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಪೀಠ ಮತ್ತು ಕುವೆಂಪು ಅಧ್ಯಯನ ಮತ್ತು ವಿಸ್ತರಣ ಕೇಂದ್ರದ ವತಿಯಿಂದ ಪಿಜಿ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

ಪರಿನಿಯಮ ರಚನೆಗೊಂಡಿರುವ ಎಲ್ಲಾ ಪೀಠಗಳನ್ನು ಅಧ್ಯಯನ ಮತ್ತು ಸಂಶೋಧನಾ ಕೇಂದ್ರಗಳನ್ನಾಗಿ ಪರಿವರ್ತಿಸಿ, ಸದರಿ ಪೀಠಗಳ ವತಿಯಿಂದ ಕರಾಮುವಿಯಲ್ಲಿನ ವಿವಿಧ ಸ್ನಾತಕ/ ಸ್ನಾತಕೋತ್ತರ ಕಾರ್ಯಕ್ರಮಗಳ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಅಡಿಯಲ್ಲಿ ಒಂದು ಮುಕ್ತ ಆಯ್ಕೆಯ (Open Elective) ವಿಷಯವನ್ನು ಪ್ರಾರಂಭಿಸುವ ಸಂಬಂಧವಾಗಿ, ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ಕರಾಮುವಿಯಲ್ಲಿರುವ ವಿವಿಧ ಅಧ್ಯಯನ ಪೀಠಗಳಿಗೆ ಸಂಬಂಧಿಸಿದಂತೆ ಎಲ್ಲಾ ಪೀಠಗಳಿಗೂ ಅಧ್ಯಯನ, ಸಂಶೋಧನಾ ಹಾಗು ವಿಸ್ತರಣಾ ಕೇಂದ್ರ ಎಂದು ಮಾಡಿಕೊಂಡು ಅವುಗಳಿಂದ ಕೆಲವು ಕೋರ್ಸುಗಳನ್ನು ನಡೆಸಲು ಕ್ರಮವಹಿಸಿದರೆ ಅದರಿಂದ ಸರ್ಕಾರದಿಂದ ನಾವು ಅನುದಾನವನ್ನು ಪಡೆದುಕೊಳ್ಳಬಹುದಾಗಿರುತ್ತದೆಂದು ಡೀನ್(ಶೈಕ್ಷಣಿಕ) ರವರು ಸಭೆಗೆ ತಿಳಿಸಿದರು.

ಕುಲಸಚಿವರು

ಕುಲಪತಿಗಳು

ಯಾವ ಯಾವ ಪೀಠಗಳು ಯಾವ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಸಂಬಂಧಪಟ್ಟವಾಗಿರುತ್ತದೆಂದು ತಿಳಿದು ಆಯಾ ಪೀಠಗಳನ್ನು ಆಯಾ ವಿಭಾಗಗಳಿಗೆ ವಹಿಸಿ ಅವುಗಳ ಜವಾಬ್ದಾರಿಯನ್ನು ಸಂಬಂಧಪಟ್ಟ ವಿಭಾಗಗಳಿಗೆ ನೀಡಬೇಕೆಂದು ಕುಲಸಚಿವರು ಮತ್ತು ಡೀನ್(ಶೈಕ್ಷಣಿಕ) ರವರು ಸಭೆಗೆ ತಿಳಿಸಿದರು.

ಮೇಲ್ಕಂಡ ಅಧ್ಯಯನ, ಸಂಶೋಧನಾ ಹಾಗು ವಿಸ್ತರಣಾ ಕೇಂದ್ರಗಳು ಶೈಕ್ಷಣಿಕವಾಗಿರುವುದರಿಂದ ಅವುಗಳಿಗೆ ಸಂಬಂಧಪಟ್ಟಂತೆ ಪರಿನಿಯಮಗಳನ್ನು ರಚಿಸಬೇಕಾಗಿರುತ್ತದೆಂದು ಕುಲಸಚಿವರು ಸಭೆಯಲ್ಲಿ ತಿಳಿಸಿದರು.

ತೀರ್ಮಾನ : **ಕರಾಮುವಿಯ ವಿವಿಧ ಪೀಠಗಳಿಗೆ ಸಂಬಂಧಿಸಿದಂತೆ ಪರಿನಿಯಮ ರಚನೆಗೊಂಡಿರುವ ಎಲ್ಲಾ ಪೀಠಗಳನ್ನು ಅಧ್ಯಯನ, ಸಂಶೋಧನಾ ಹಾಗು ವಿಸ್ತರಣಾ ಕೇಂದ್ರಗಳನ್ನಾಗಿ ಪರಿವರ್ತಿಸಿ ಅವುಗಳ ಮುಖಾಂತರ (CBCS) ಅಡಿಯಲ್ಲಿ ಒಂದು ಮುಕ್ತ ಆಯ್ಕೆಯ (Open Elective) ವಿಷಯವನ್ನು ಪ್ರಾರಂಭಿಸುವ ಸಂಬಂಧವಾಗಿ ಪರಿನಿಯಮಗಳನ್ನು ರಚಿಸಿ/ತಿದ್ದುಪಡಿ ಮಾಡಿ ಕ್ರಮವಹಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.**

-----

**ವಿಷಯ ಸಂಖ್ಯೆ : 55.08**

**ವಿಷಯ:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳು ಡಿಪ್ಲೊಮಾ ಕಾರ್ಯಕ್ರಮ ಹಾಗೂ ಯೋಗ ವಿಜ್ಞಾನದಲ್ಲಿ ಸರ್ಟಿಫಿಕೇಟ್ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ನೆನಪೋಲೆ ಸಂಖ್ಯೆ: ಕರಾಉಶಿಪ/10/ದೈಹಿಕ ಶಿಕ್ಷಣ/2020-21/368, ದಿನಾಂಕ: 20-6-2020 ಅನ್ನು ಆಧರಿಸಿ ಕೆಳಕಂಡ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಮಂಡಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ 2021-22ನೇ ಶೈಕ್ಷಣಿಕ ಸಾಲಿನಿಂದ ಕೆಳಕಂಡ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿರುತ್ತದೆ.

1. ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳು – ಒಂದು ವರ್ಷದ ಡಿಪ್ಲೋಮಾ ಕಾರ್ಯಕ್ರಮ
2. ಯೋಗ ಶಿಕ್ಷಣ – ಆರು ತಿಂಗಳ ಸರ್ಟಿಫಿಕೇಟ್ ಕಾರ್ಯಕ್ರಮ

ಸದರಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಅಗತ್ಯವಿರುವ ಬೋಧನಾ ಸಿಬ್ಬಂದಿ, ಬೋಧಕೇತರ ಸಿಬ್ಬಂದಿ, ಅವರುಗಳಿಗೆ ನಿಗಧಿಪಡಿಸಬೇಕಾದ ವಿದ್ಯಾರ್ಹತೆ, ವೇತನ, ಉಪಕರಣ ಖರೀದಿ ಹಾಗೂ ನಿರ್ವಹಣಾ ವೆಚ್ಚಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಸ್ತಾವನೆವನ್ನು ಹಾಗೂ ಸದರಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಆಧ್ಯಾದೇಶದ ಕರಡನ್ನು ಶೈಕ್ಷಣಿಕ ಮಂಡಳಿಯ ಅವಗಾಹನೆಗೆ ಮಂಡಿಸಲಾಗಿದೆ.

ಕುಲಸಚಿವರು ಕುಲಪತಿಗಳು

2021–22ನೇ ಶೈಕ್ಷಣಿಕ ಸಾಲಿನಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳು ಡಿಪ್ಲೊಮಾ ಕಾರ್ಯಕ್ರಮ ಹಾಗೂ ಯೋಗ ವಿಜ್ಞಾನದಲ್ಲಿ ಸರ್ಟಿಫಿಕೇಟ್ ಕಾರ್ಯಕ್ರಮವನ್ನು ಪ್ರಾರಂಭಿಸುವ ಸಂಬಂಧ ಪ್ರಸ್ತಾವನೆ ಹಾಗೂ ಕರಡು ಅಧ್ಯಾದೇಶಕ್ಕೆ ಶೈಕ್ಷಣಿಕ ಮಂಡಳಿಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ಯುಜಿಸಿ/ಸರ್ಕಾರದ ಮಾರ್ಗಸೂಚಿಯಲ್ಲಿ ಸೂಚಿಸಿರುವಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ನೆನಮೋಲೆ ಸಂಖ್ಯೆ: ಕರಾಉಶಿಪ/10/ದೈಹಿಕ ಶಿಕ್ಷಣ/2020–21/368, ದಿನಾಂಕ: 20–6–2020ಅನ್ನು ಆಧರಿಸಿ ಕರಾಮುವಿಯ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ 2021–22ನೇ ಶೈಕ್ಷಣಿಕ ಸಾಲಿನಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳು ಡಿಪ್ಲೊಮಾ ಕಾರ್ಯಕ್ರಮ ಹಾಗೂ ಯೋಗ ವಿಜ್ಞಾನದಲ್ಲಿ ಸರ್ಟಿಫಿಕೇಟ್ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ ಮನವಿ ಸಲ್ಲಿಸಿರುತ್ತಾರೆಂದು ಡೀನ್(ಶೈಕ್ಷಣಿಕ)ರವರು ಸಭೆಗೆ ತಿಳಿಸಿದರು.

ಯುಜಿಸಿ ನಿಯಮಗಳ ಪ್ರಕಾರ ವಿಶ್ವವಿದ್ಯಾನಿಲಯಗಳ 2021–22ನೇ ಶೈಕ್ಷಣಿಕ ಸಾಲಿನಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡೆಗಳು ಡಿಪ್ಲೊಮಾ ಕಾರ್ಯಕ್ರಮ ಹಾಗೂ ಯೋಗ ವಿಜ್ಞಾನದಲ್ಲಿ ಸರ್ಟಿಫಿಕೇಟ್ ಕಾರ್ಯಕ್ರಮವನ್ನು ಪ್ರಾರಂಭಿಸುವ ಮುನ್ನ ಅಧ್ಯಾದೇಶವನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿ, ಮಾನ್ಯ ಕುಲಾಧಿಪತಿಗಳಿಂದ ಅಂಕಿತ ಪಡೆದು ಕಾರ್ಯನಿರ್ವಹಿಸುವಂತೆ ಮಾನ್ಯ ಕುಲಪತಿಗಳು ತಿಳಿಸಿದರು.

ತೀರ್ಮಾನ : **ಕರಾಮುವಿಯ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ 2021–22ನೇ ಶೈಕ್ಷಣಿಕ ಸಾಲಿನಿಂದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಷಯದಲ್ಲಿ ಡಿಪ್ಲೊಮಾ ಕಾರ್ಯಕ್ರಮ ಹಾಗೂ ಯೋಗ ವಿಜ್ಞಾನದಲ್ಲಿ ಸರ್ಟಿಫಿಕೇಟ್ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ ಅಧ್ಯಾದೇಶವನ್ನು ಸಿದ್ಧಪಡಿಸಿ ಸರ್ಕಾರದಿಂದ ಅನುಮೋದನೆ ಪಡೆದು ಕ್ರಮವಹಿಸಲು ಸಭೆಯು ನಿರ್ಣಯಿಸಿತು.**

-----

**ವಿಷಯ ಸಂಖ್ಯೆ: 55.09**

**ವಿಷಯ: ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದ ನಿಯಮಾವಳಿ 2017 ಪ್ರಕಾರ Plagiarism ಕಡ್ಡಾಯಗೊಳಿಸಲು ಮತ್ತು ಸದರಿ ನಮೂನೆಗಳ ಸಂಬಂಧ ಅನುಮೋದನೆಗಾಗಿ.**

*****

ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗದ ದೂರ ಮತ್ತು ಮುಕ್ತ ಶಿಕ್ಷಣ ನಿಯಮಾವಳಿ 2017 ಮತ್ತು ಸದರಿ ಆಯೋಗದ Plagiarism ಗೆ ಸಂಬಂಧಿಸಿದ ದಿನಾಂಕ: 23–07–2018ರ ಆದೇಶ ಹಾಗು ವಿಶ್ವವಿದ್ಯಾನಿಲಯಗಳ ಬೋಧಕವರ್ಗದ ಸಂಶೋಧನೆಯ ಗುಣಮಟ್ಟ ಸುಧಾರಿಸುವುದು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನಾ ಸಂಸ್ಕೃತಿಯನ್ನು ಸುಧಾರಿಸಲು ಹೊಸ ಜ್ಞಾನ ಮತ್ತು ತಂತ್ರಗಳನ್ನು ರಚಿಸುವುದು ಎಂಬುದರ ಬಗೆಗಿನ ಧನಸಹಾಯ ಆಯೋಗದ ದಿನಾಂಕ: 31–07–2019 ರ ನಿಯಮಾವಳಿಯ ಪ್ರಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಿಯಮಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.

ಕುಲಸಚಿವರು

ಕುಲಪತಿಗಳು

2020-2021 ನೇ ಶೈಕ್ಷಣಿಕ ಸಾಲಿನಿಂದ ವಿವಿಯ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಅನ್ನು ಅಳವಡಿಸಿಕೊಂಡು ಪಠ್ಯಕ್ರಮ/ಅಧ್ಯಯನ ಸಾಮಗ್ರಿಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಮತ್ತು ಸಂಶೋಧನಾ ವಿಭಾಗಗಳಲ್ಲಿ ಸಂಶೋಧನಾ ಪ್ರಬಂಧಗಳು ಮಂಡನೆ/ ಅನುಮೋದಿಸುವ ಸಂದರ್ಭ, ಮೇಲೆ ಸೂಚಿಸಿರುವಂತೆ ಧನಸಹಾಯ ಆಯೋಗದ ಆಶಯದಂತೆ Plagiarism Check ಮಾಡಿಸಿ ಶೈಕ್ಷಣಿಕ ಮೌಲ್ಯವನ್ನು ಕಾಪಾಡಿಕೊಳ್ಳಬೇಕಾಗಿದೆ.

ಈ ಹಿನ್ನಲೆಯಲ್ಲಿ ಎಲ್ಲಾ ಅಧ್ಯಯನ ವಿಭಾಗಗಳು ಪ್ರಸ್ತುತ ಸಿದ್ಧಪಡಿಸುವ ಅಧ್ಯಯನ ಸಾಮಗ್ರಿಗಳಿಗೆ Plagiarism Check ಮಾಡಿಸುವುದನ್ನು ಕಡ್ಡಾಯಗೊಳಿಸಬೇಕಾಗಿದೆ. Plagiarism Check ನ ತಂತ್ರಾಂಶ ವಿವಿಯ ಗ್ರಂಥಾಲಯದಲ್ಲಿ ಲಭ್ಯವಿರುತ್ತದೆ. ಹಾಗಾಗಿ, ಗ್ರಂಥಪಾಲಕರಿಗೆ Plagiarism Checkಗೆ ಬಳಸಬೇಕಾದ ಅರ್ಜಿ ನಮೂನೆ ಮತ್ತು ಗ್ರಂಥಪಾಲಕರು ನೀಡಬೇಕಾದ ವರದಿಯ ನಮೂನೆಗಳನ್ನು ಸಿದ್ಧಪಡಿಸಿದೆ. ಸದರಿ ಅಂಶವನ್ನು ಶೈಕ್ಷಣಿಕ ಮಂಡಳಿಯ ಅವಗಾಹನೆಗೆ ತರುತ್ತಾ ಪ್ರಸ್ತಾಪಿತ ವಿಷಯಗಳನ್ನು ಮತ್ತು ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗದ ಶಿಫಾರಸ್ಸು ಹಾಗು ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲು ವಿಷಯವನ್ನು ಅನುಮೋದನೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

ಮಾನ್ಯ ಕುಲಪತಿಗಳು ಮಾತನಾಡಿ ಕರಾಮುವಿಯಲ್ಲಿ ಹೊಸ ಕಾರ್ಯಕ್ರಮಗಳಿಗೆ ಅವುಗಳನ್ನು ಅಳವಡಿಸಿಕೊಳ್ಳಬೇಕು. CBCS ಸಿಲಬಸ್‌ಗೆ ಸಂಬಂಧಪಟ್ಟಂತೆ ಕಲಿಕಾ ಸಾಮಗ್ರಿಗಳನ್ನು ಸಿದ್ದಪಡಿಸುವ ಬಗ್ಗೆ ಮುಂಚಿತವಾಗಿ ಎಲ್ಲರಿಗೂ ಒಂದು ಸುತ್ತೋಲೆಯನ್ನು ನೀಡಬೇಕೆಂದು ತಿಳಿಸಿದರು.

**ತೀರ್ಮಾನ : ಕರಾಮುವಿಯಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಇನ್ನು ಮುಂದೆ ತಯಾರಿಸುವ ಎಲ್ಲಾ ಕಲಿಕಾ ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದ ನಿಯಮಾವಳಿ 2017 ಪ್ರಕಾರ Plagiarism check ಕಡ್ಡಾಯಗೊಳಿಸಲು ಮತ್ತು ಸದರಿ ನಮೂನೆಗಳ ಸಂಬಂಧ ಯುಜಿಸಿ ಅಧ್ಯಾದೇಶದಲ್ಲಿ ಇರುವ ನಿಯಮಗಳನ್ನು ಅಳವಡಿಸಿಕೊಳ್ಳಲು ಸಭೆಯು ನಿರ್ಣಯಿಸಿತು.**

-----

**ವಿಷಯ ಸಂಖ್ಯೆ : 55.10**

**ವಿಷಯ: ಡಾ. ಹೇಮಲತಾ ಆರ್. ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು-06 ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಬಗೆಗೆ.**

*****

**ಡಾ. ಹೇಮಲತಾ ಆರ್.** ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು-06 ಇವರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸಲು ದಿನಾಂಕ: 22.10.2019 ಮತ್ತು ದಿನಾಂಕ: 24.07.2020 ರಂದು ಮನವಿಯನ್ನು ಸಲ್ಲಿಸಿರುತ್ತಾರೆ. **ಅನುಬಂಧ (ಅ)** ನಲ್ಲಿ ಪ್ರತಿ ಲಗತ್ತಿಸಿದೆ.

ಕುಲಸಚಿವರು

ಕುಲಪತಿಗಳು

ಸದರಿಯವರು ಸಲ್ಲಿಸಿರುವ ಮನವಿಗಳಲ್ಲಿ ನಾವು ಸಂಶೋಧನಾ ಮಾರ್ಗದರ್ಶಕರಾಗಲು ಎಲ್ಲಾ ಅರ್ಹತೆಗಳನ್ನು ಹೊಂದಿದ್ದು, ಅವಕಾಶಗಳನ್ನು ಕಲ್ಪಿಸಿ ಕೊಡಬೇಕೆಂದು ಕೋರಿರುತ್ತಾರೆ.

ಡಾ. ಹೇಮಲತಾ ಆರ್. ಅವರ ಅರ್ಜಿಯನ್ನು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಸದಸ್ಯರು ಪರಿಗಣಿಸಿ ಅನುಮೋದಿಸಿರುತ್ತಾರೆ.

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : **ಯುಜಿಸಿ 2018ರ ಪಿಹೆಚ್.ಡಿ ನಿಯಮಾವಳಿ ಪ್ರಕಾರ ವಿವರಿಸಲಾಗಿರುವ ಮಾಹಿತಿಗಳು ಸಮರ್ಪಕವಾಗಿದ್ದಲ್ಲಿ ಡಾ.ಹೇಮಲತಾ ಆರ್. ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸಲು ಸಭೆಯು ನಿರ್ಣಯಿಸಿತು.**

-----

**ವಿಷಯ ಸಂಖ್ಯೆ : 55.11**

**ವಿಷಯ: ಕ.ರಾ.ಮು.ವಿ.ಯ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರವೇಶಾತಿ ಪೂರ್ವ ಸಮಾಲೋಚಕರ ಪ್ರೋತ್ಸಾಹ ಧನವನ್ನು ಹೆಚ್ಚು ಮಾಡುವ ಕುರಿತು.**

*****

"ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲಡೆ" ಎಂಬ ಧ್ಯೇಯೋದ್ದೇಶಕ್ಕೆ ಅನುಗುಣವಾಗಿ ವಿವಿ ನಿಲಯವು, ವಿದ್ಯೆ ತಲುಪದಿರುವ ಸ್ಥಳಗಳಲ್ಲಿನ ಆಸಕ್ತರಿಗೆ ವಿದ್ಯೆಯನ್ನು ಕೊಂಡೊಯ್ಯುವ ಕಾರಣಕ್ಕಗಿ ರಾಜ್ಯದ ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿನ ವಿದ್ಯಾಕಾಂಕ್ಷಿಗಳಿಗೆ ವಿದ್ಯೆಯನ್ನು ತಲುಪಿಸಲು ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿದೆ. ಕಲಿಕಾರ್ಥಿ ಕೇಂದ್ರಗಳಲ್ಲಿನ ಸಿಬ್ಬಂದಿ ಕ.ರಾ.ಮು.ವಿ.ಯ ಧ್ಯೇಯ ವಾಕ್ಯಕ್ಕೆ ಪೂರಕವಾಗಿ ಪ್ರತಿಕ್ರಿಯಿಸಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಮಹತ್ವವನ್ನು ಸಮಾಲೋಚನೆ ಮಾಡುವ ಮೂಲಕ ತಿಳಿಯಪಡಿಸಿ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಲು ಶ್ರಮಿಸುವ ಪ್ರವೇಶಾತಿ ಪೂರ್ವ ಸಮಾಲೋಚಕರಿಗೆ (Pre-Admisson Counselors) ಕ.ರಾ.ಮು.ವಿ.ಯಿಂದ ಪ್ರೋತ್ಸಾಹ ಧನ ರೂ. 200/- ಗಳನ್ನು ನೀಡಲಾಗುತ್ತಿತ್ತು (ಪ್ರವೇಶಾತಿ ಪಡೆದ ಪ್ರತಿ ವಿದ್ಯಾರ್ಥಿಗೆ ಅನುಗುಣವಾಗಿ) **ಸದರಿ ಪ್ರೋತ್ಸಾಹ ಧನವನ್ನು 200/- ರಿಂದ 400/- ರೂ.ಗಳಿಗೆ ಏರಿಕೆ ಮಾಡುವ ಸಂಬಂಧ** ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ ಆದ್ದರಿಂದ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

ಮಾನ್ಯ ಕುಲಪತಿಗಳು ಮಾತನಾಡಿ ಹೊಸದಾಗಿ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭಕ್ಕೆ ಹೊಸದಾಗಿ ODL Regulation 2020 ಬಿಡುಗಡೆಯಾಗುತ್ತದೆ. ಈ ಸಂದರ್ಭದಲ್ಲಿ ಪ್ರವೇಶಾತಿ ಮಾಡಲು ಶ್ರಮಿಸುವ ಪ್ರವೇಶಾತಿ ಪೂರ್ವ ಸಮಾಲೋಚಕರಿಗೆ ಕ.ರಾ.ಮು.ವಿ.ಯಿಂದ ಪ್ರೋತ್ಸಾಹ ಧನ ರೂ. 200/- ಗಳನ್ನು ನೀಡಲಾಗುತ್ತಿತ್ತು (ಪ್ರವೇಶಾತಿ ಪಡೆದ ಪ್ರತಿ ವಿದ್ಯಾರ್ಥಿಗೆ ಅನುಗುಣವಾಗಿ) ಸದರಿ ಪ್ರೋತ್ಸಾಹ ಧನವನ್ನು 200/- ರಿಂದ 400/- ರೂ. ಗಳಿಗೆ ಏರಿಕೆ ಮಾಡುವ ಸಂಬಂಧ ಕ್ರಮವಹಿಸಬೇಕಾಗಿರುತ್ತದೆ.

ಕುಲಸಚಿವರು

ಕುಲಪತಿಗಳು

ವಿದ್ಯಾರ್ಥಿಗಳು ಪ್ರವೇಶಾತಿ ಸಂದರ್ಭದಲ್ಲಿ ಪೂರ್ವ ಸಮಾಲೋಚಕರೇ ವಿದ್ಯಾರ್ಥಿಗಳ ದಾಖಲಾತಿಗಳನ್ನು ಪಡೆದು ಅದಕ್ಕೆ ಹಿಂಬರಹ ನೀಡಿ ಅವುಗಳನ್ನು ಕುಲಂಕುಶವಾಗಿ ಪರಿಶೀಲಿಸಿ ಅವುಗಳನ್ನು ಸ್ಕ್ಯಾನ್ ಮಾಡಿ ಅವುಗಳನ್ನು ಸಂಬಂಧಪಟ್ಟ ಪ್ರಾದೇಶಿಕ ಕೇಂದ್ರದ ನಿರ್ದೇಶಕರಿಗೆ ಸಲ್ಲಿಸಬೇಕೆಂದು ತಿಳಿಸಿದರು. ಪ್ರಾದೇಶಿಕ ನಿರ್ದೇಶಕರುಗಳು ಅವರುಗಳನ್ನು ಪರಿಶೀಲಿಸಿ, ವಿದ್ಯಾರ್ಥಿಯ ಮೂಲ ದಾಖಲಾತಿಯನ್ನು ನೀಡಿದ ಸಂದರ್ಭದಲ್ಲಿಯೂ ಸಹ ಅವರಿಂದ ಹಿಂಬರಹವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ತೀರ್ಮಾನ : **ವಿಶ್ವವಿದ್ಯಾನಿಲಯದಲ್ಲಿ ನೋಂದಾಯಿತ ಪ್ರವೇಶಾತಿ ಸಮಾಲೋಚಕರಿಗೆ ಪ್ರೋತ್ಸಾಹ ಧನ ರೂ.200/-ಗಳನ್ನು ನೀಡಲಾಗುತ್ತಿದ್ದು, ಕರಾಮುವಿಯ 2020-21ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲು ಅನುವಾಗುವಂತೆ ಪ್ರೋತ್ಸಾಹ ಧನವನ್ನು 200/- ರೂ. ಗಳ ಬದಲಾಗಿ 400/- ರೂ. ಗಳಿಗೆ ಹೆಚ್ಚಿಸಲು ಸಭೆಯು ನಿರ್ಣಯಿಸಿತು ಹಾಗು ಸದರಿ ವಿಷಯವನ್ನು ಹಣಕಾಸು ಸಮಿತಿ ಸಭೆಯ ಅನುಮೋದನೆಗೆ ಮಂಡಿಸಲು ತೀರ್ಮಾನಿಸಲಾಯಿತು.**

-----

**ವಿಷಯ ಸಂಖ್ಯೆ : 55.12**

**ವಿಷಯ: ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗುವ ಬಾಹ್ಯ ಸಂಪನ್ಮೂಲ ವ್ಯಕ್ತಿಗಳ ಸಂಭಾವನೆ ಮತ್ತು Internet Charges ಅನ್ನು ನಿಗದಿಪಡಿಸುವ ಬಗ್ಗೆ**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2018-19 ಮತ್ತು 2019-20 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಸಂಬಂಧ, ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಡುವ ಬಾಹ್ಯ ಸಂಪನ್ಮೂಲ ವ್ಯಕ್ತಿಗಳ ಸಂಭಾವನೆಯನ್ನು ಒಂದು ಗಂಟೆಗೆ ಸ್ನಾತಕ ತರಗತಿಗೆ ರೂ. 600/- ಮತ್ತು ಸ್ನಾತಕೋತ್ತರ ತರಗತಿಗೆ ರೂ. 750/- ರಂತೆ ಮತ್ತು Internet Charges ಅನ್ನು ಒಂದು ಅವಧಿಗೆ ರೂ. 100/- ರಂತೆ ನಿಗದಿ ಪಡಿಸಲು, ಸದರಿ ವಿಷಯವನ್ನು ಕರಾಮುವಿಯ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಸದರಿ ವಿಷಯದ ಅನುಮೋದನೆ ಮತ್ತು ತೀರ್ಮಾನವನ್ನು ಕೋರಿ ವಿಷಯ ಮಂಡಿಸಿದೆ.

ತೀರ್ಮಾನ : **ವಿಶ್ವವಿದ್ಯಾನಿಲಯದ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗುವ ಬಾಹ್ಯ ಸಂಪನ್ಮೂಲ ವ್ಯಕ್ತಿಗಳಿಗೆ Internet ವೆಚ್ಚಗಳನ್ನು ಪ್ರತ್ಯೇಕವಾಗಿ ನೀಡುವ ಬದಲು ತರಗತಿಗಳನ್ನು ತೆಗೆದುಕೊಳ್ಳುವ ಪರಿಣಿತರ ಸಂಭಾವನೆಯನ್ನು ಪರಿಷ್ಕರಿಸಲು ತೀರ್ಮಾನಿಸಲಾಯಿತು ಹಾಗು ಸದರಿ ವಿಷಯವನ್ನು ಹಣಕಾಸು ಸಮಿತಿ ಸಭೆಯ ಅನುಮೋದನೆಗೆ ಮಂಡಿಸಲು ತೀರ್ಮಾನಿಸಿತು.**

-----

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ : 55.13

**ವಿಷಯ: ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು.**

ವಿಷಯ ಸಂಖ್ಯೆ : 1

**ವಿಷಯ: ವಿಷಯ: ಕರಾಮುವಿ ಪಿಹೆಚ್.ಡಿ ಅಧ್ಯಾದೇಶ 2012 (2ನೇ ತಿದ್ದುಪಡಿ 2019)ರ ಸೆಕ್ಷನ್ 5.4ಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಿಕೆಯನ್ನು ಅನುಮೋದಿಸುವ ಬಗ್ಗೆ.**

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಪಿಹೆಚ್.ಡಿ ಅಧ್ಯಾದೇಶ 2012 (2ನೇ ತಿದ್ದುಪಡಿ 2019)ರ ಸೆಕ್ಷನ್ 5.4 ರಲ್ಲಿ ಈ ರೀತಿ ಇರುತ್ತದೆ – In an extraordinary Circumstance, the Vice-Chancellor shall permit the Research Supervisor to guide an additional Ph.D candidate.

ಈ ಬಗ್ಗೆ ಹೆಚ್ಚಿನ ಸ್ಪಷ್ಟತೆ ನೀಡಲು ಸೆಕ್ಷನ್ 5.4ಕ್ಕೆ ಅನ್ವಯವಾಗುವಂತೆ ಮಾರ್ಗದರ್ಶಿಕೆಯನ್ನು ಸಿದ್ದಪಡಿಸಿದ್ದು, ಪೂರ್ವಾನ್ವಯವಾಗುವಂತೆ ಈ ಮಾರ್ಗದರ್ಶಿಕೆಯ ವಿವರಗಳನ್ನು, ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಕರಾಮುವಿ ಪಿಹೆಚ್.ಡಿ ಅಧ್ಯಾದೇಶ 2012 (2ನೇ ತಿದ್ದುಪಡಿ 2019)ರ ಸೆಕ್ಷನ್ 5.4ಗೆ ಸಂಬಂಧಿಸಿದಂತೆ ಮಾರ್ಗದರ್ಶಿಕೆಯ ವಿವರಗಳನ್ನು ಅಳವಡಿಸಿಕೊಳ್ಳಲು ಒಪ್ಪಲಾಯಿತು.**

ವಿಷಯ ಸಂಖ್ಯೆ : 2

**ವಿಷಯ: ಕರಾಮುವಿಯಲ್ಲಿ** ಐ.ಐ.ಟಿ ಬಾಂಬೆ ಇವರ ಸಹಯೋಗದಲ್ಲಿ Spoken tutorial ಮೂಲಕ Online ಮುಖಾಂತರ ನಡೆಸುವ ಕಾರ್ಯಾಗಾರಗಳು ಒಂದು MOOCs ಕೋರ್ಸ್‌ನ ಸಮಾನ ಎಂದು ಪರಿಗಣಿಸುವ ಬಗ್ಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಅಡಿಯಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗು ಬಾಹ್ಯ ಆಸಕ್ತರಿಗೆ ಐ.ಐ.ಟಿ ಬಾಂಬೆ ಅವರ ಸಹಯೋಗದಲ್ಲಿ Spoken tutorial ಮೂಲಕ Online ಮುಖಾಂತರ ಕಾರ್ಯಾಗಾರಗಳನ್ನು ನಡೆಸಲು ಉದ್ದೇಶಿಸಿದೆ.

ಈ ರೀತಿಯಾದ ಐ.ಐ.ಟಿ ಬಾಂಬೆಯ ಸಹಯೋಗದಲ್ಲಿ Spoken tutorial ಮೂಲಕ Online ಮುಖಾಂತರ ನಡೆಸುವ ಕಾರ್ಯಾಗಾರಗಳು ಒಂದು MOOCs ಕೋರ್ಸ್‌ನ ಸಮಾನ ಎಂದು ಅನೇಕ ವಿಶ್ವವಿದ್ಯಾನಿಲಯಗಳು ಮಾನ್ಯ ಮಾಡಿದೆ. ಇದೇ ರೀತಿ ಕರಾಮುವಿಯಲ್ಲೂ ಸಹ ಮಾನ್ಯತೆ ದೊರಕಿಸುವ ಉದ್ದೇಶದಿಂದ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

ಕುಲಸಚಿವರು

ಕುಲಪತಿಗಳು

ತೀರ್ಮಾನ : ಕರಾಮುವಿಯಲ್ಲಿ ಐ.ಐ.ಟಿ ಬಾಂಬೆ ಇವರ ಸಹಯೋಗದಲ್ಲಿ **Spoken tutorial** ಮೂಲಕ **Online** ಮುಖಾಂತರ ನಡೆಸುವ ಕಾರ್ಯಾಗಾರಗಳು ಒಂದು **MOOCs** ಕೋರ್ಸ್‌ನ ಸಮಾನ ಎಂದು ಪರಿಗಣಿಸುವ ಸಂಬಂಧದ ವಿಷಯದ ಚರ್ಚೆಯನ್ನು ಮುಂದೂಡಲಾಯಿತು.

-----

ಅಂತಿಮವಾಗಿ 55ನೇ ಶೈಕ್ಷಣಿಕ ಮಂಡಳಿಯ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಸಚಿವರು ಹಾಗೂ**
**ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗೂ ಅಧ್ಯಕ್ಷರು**